

ಭಾರತೀಯ ಗಡಿಭದ್ರತಾ ಪಡೆ ಸೈನಿಕರು, ಚೀನಾ ಗಡಿ ಸಮೀಪದ ಲೇಹ್‌ಗೆ ತಲುಪುವ ಹೆದ್ದಾರಿಯಲ್ಲಿ ಕಾವಲು ನಿಂತಿರುವುದು. ಶಸ್ತ್ರಸಜ್ಜಿತ ಯೋಧನ ಎದುರೇ ಕಟ್ಟಿಗೆ ಹೊತ್ತು ಹೊರಟಿರುವ ಹಳ್ಳಿಯ ಮಹಿಳೆಯರು

ಭಾರತಕ್ಕೆ ಸಡ್ಡು ಹೊಡೆಯುತ್ತಿದೆ.

2015ರಲ್ಲಿ ರಸ್ತೆಯೊಂದನ್ನು ನಿರ್ಬಂಧಿಸುವ ವಿಚಾರದಲ್ಲಿ ಭಾರತ ಮತ್ತು ನೇಪಾಳಗಳ ಸಂಬಂಧ ತುಸು ಹಳಸಿತು. ಆ ಹೊತ್ತಿಗೆ ಚೀನಾ ಹಿಮಾಲಯ ದೇಶದ ದೊಡ್ಡದೊಡ್ಡ ಯೋಜನೆಗಳಲ್ಲಿ ಹೂಡಿಕೆ ಆರಂಭಿಸಿತ್ತು.

ನೇಪಾಳದಲ್ಲಿ ಚೀನಾ 8 ಅತಿಮುಖ್ಯ ಜಲವಿದ್ಯುತ್ ಯೋಜನೆಗಳಿಗೆ ಹಣ ಹೂಡಿದೆ. ಶ್ರೀಲಂಕಾ ತನ್ನ ಹಂಬನ್‌ಟೋಟಾ ಬಂದರು ಅಭಿವೃದ್ಧಿಗಾಗಿ ಚೀನಾದಿಂದ 2015ರಲ್ಲಿ 1.5 ಲಕ್ಷ ಕೋಟಿ ಡಾಲರ್ ಸಾಲ ಪಡೆದಿತ್ತು. ಸಾಲ ಮರುಪಾವತಿ ಅಸಾಧ್ಯವೆನಿಸಿದಾಗ ಅದೇ ಬಂದರನ್ನು ದೀರ್ಘಾವಧಿ ಗುತ್ತಿಗೆಗೆ ಚೀನಾಕ್ಕೆ ಬಿಟ್ಟುಕೊಟ್ಟಿತು. ಮಾಲ್ಡೀವ್ಸ್ ಮತ್ತು ಶ್ರೀಲಂಕಾಗಳಲ್ಲಿಯೂ ಭಾರತಕ್ಕೆ ಕಿರಿಕಿರಿ ಮಾಡುವಂಥವರೇ ಅಧಿಕಾರಕ್ಕೆ ಬರಲು ಚೀನಾ ತೆರೆಮರೆಯ ಆಟ ಆಡಿತ್ತು.

ಭಾರತದ ಸುತ್ತಲಿನ ದೇಶಗಳನ್ನು ತನ್ನತ್ತ ಒಲಿಸಿಕೊಂಡು ಎತ್ತಿಕಟ್ಟುವ ಮೂಲಕ ಭಾರತವನ್ನು ಸುತ್ತುವರಿಯುವ ತಂತ್ರವೊಂದನ್ನು ಚೀನಾ ಹಲವು ವರ್ಷಗಳಿಂದ ಅನುಷ್ಠಾನಗೊಳಿಸುತ್ತಿದೆ. ವಾಣಿಜ್ಯ ವ್ಯವಹಾರಕ್ಕೆಂದು ಒಪ್ಪಂದ ಮಾಡಿಕೊಂಡು, ಅಭಿವೃದ್ಧಿಪಡಿಸಿದ ಪಾಕಿಸ್ತಾನದ ಗ್ವಾದರ್ ಬಂದರಿನಲ್ಲಿ ಸೇನಾ ಚಟುವಟಿಕೆಗಳು ಆರಂಭವಾಗಿವೆ. ಬಾಂಗ್ಲಾದೇಶದ ಕಾಕ್ಸ್ ಬಜಾರ್ ಬಂದರು ಅಭಿವೃದ್ಧಿಪಡಿಸಿ, ಅದನ್ನೂ ತನ್ನ ಅನುಕೂಲಕ್ಕೆ ಬಳಸಿಕೊಳ್ಳುವ ಯತ್ನಗಳನ್ನು ಚೀನಾ ಚಾಲ್ತಿಯಲ್ಲಿಯಿಟ್ಟಿದೆ. ಪಾಕಿಸ್ತಾನವನ್ನು ಕೈಗೊಂಬೆಯಾಗಿಸಿಕೊಂಡು, ಹಿಂದೆ ನಿಂತು ಭಾರತವನ್ನು ನಿಯಂತ್ರಿಸಲು ಯತ್ನಿಸುತ್ತಿರುವ ಚೀನಾದ ಈ ತಂತ್ರಗಳು ಇದೀಗ ಜಗಜ್ಜಾಹೀರು.

ಇದಕ್ಕೆ ಪ್ರತಿ ಎಂಬಂತೆ ಭಾರತ ಇರಾನಿನ ಛಬಾರ್ ಬಂದರು ಅಭಿವೃದ್ಧಿಪಡಿಸಿದೆ. ವಿಯೆಟ್ನಾಂ, ಜಪಾನ್ ಸೇರಿದಂತೆ ದಕ್ಷಿಣ ಚೀನಾ ಸಮುದ್ರದ ವಿವಾದದಲ್ಲಿ ಚೀನಾದ ವಿರುದ್ಧ ನಿಂತಿರುವ ದೇಶಗಳೊಂದಿಗೆ ಭಾರತ ಹಲವು ಒಪ್ಪಂದಗಳನ್ನು ಮಾಡಿಕೊಂಡಿದೆ. ಶಾಂತ ಸಾಗರದಲ್ಲಿ ಪಾರಮ್ಯ ಮೆರೆಯುತ್ತಿರುವ ಅಮೆರಿಕದೊಂದಿಗೆ ಬಾಂಧವ್ಯ ವೃದ್ಧಿಸಿಕೊಂಡಿರುವ ಭಾರತದ ಮುಂದಿನ ನಡೆಯ ಬಗ್ಗೆ ಚೀನಾದಲ್ಲಿ ಆತಂಕವಿದೆ.

**ವಾಣಿಜ್ಯ ವ್ಯವಹಾರಕ್ಕೆಂದು ಒಪ್ಪಂದ ಮಾಡಿಕೊಂಡು, ಅಭಿವೃದ್ಧಿಪಡಿಸಿದ ಪಾಕಿಸ್ತಾನದ ಗ್ವಾದರ್ ಬಂದರಿನಲ್ಲಿ ಸೇನಾ ಚಟುವಟಿಕೆಗಳು ಆರಂಭವಾಗಿವೆ. ಬಾಂಗ್ಲಾದೇಶದ ಕಾಕ್ಸ್ ಬಜಾರ್ ಬಂದರು ಅಭಿವೃದ್ಧಿಪಡಿಸಿ, ಅದನ್ನೂ ತನ್ನ ಅನುಕೂಲಕ್ಕೆ ಬಳಸಿಕೊಳ್ಳುವ ಯತ್ನಗಳನ್ನು ಚೀನಾ ಚಾಲ್ತಿಯಲ್ಲಿದೆ.**

‘ಭಾರತ ಮತ್ತು ಚೀನಾ ದೇಶಗಳ ಸಂಬಂಧ ಚೆನ್ನಾಗಿರಬೇಕು. ದೂರದ ಅಮೆರಿಕ ತಾಳಕ್ಕೆ ಕುಣಿದು ಚೀನಾದೊಂದಿಗೆ ಬಾಂಧವ್ಯ ಕೆಡಿಸಿಕೊಂಡರೆ ಭಾರತದ ಹಿತಾಸಕ್ತಿಗೆ ಒಳ್ಳೆಯದಲ್ಲ’ ಎನ್ನುವ ಸಾಲುಗಳು ಚೀನಾ ಸರ್ಕಾರದ ಮುಖವಾಣಿ ‘ಗ್ಲೋಬಲ್ ಟೈಮ್ಸ್’ನಲ್ಲಿ ಈಚೆಗೆ ಪ್ರಕಟವಾಗಿವೆ. ಈ ಸಾಲುಗಳ ನಡುವೆ ಈ ಬರಹ ಓದಿದರೆ ಭಾರತದ ಪರ ನಿಲ್ಲಬಾರದು ಎಂದು ಅಮೆರಿಕಕ್ಕೆ ಪರೋಕ್ಷ ಸಂದೇಶ ನೀಡುವ ಯತ್ನವೂ ಇಣುಕಿದಂತೆ ಆಗುತ್ತದೆ.

## ಇಂದು ನಿನ್ನೆಯದಲ್ಲ ಈ ಗಡಿ ವಿವಾದ

ಅಣ್ವಸ್ತ್ರ ಶಕ್ತ ಎರಡು ದೇಶಗಳು ಯುದ್ಧದ ಅಂಚಿಗೆ ಬಂದು ನಿಲ್ಲಲು ಕಾರಣವಾಗಿರುವ ಗಡಿ ವಿವಾದ ಇಂದು ನಿನ್ನೆಯದಲ್ಲ. ಈಚೆಗೆ 20 ಭಾರತೀಯ ಯೋಧರು ಹುತಾತ್ಮರಾಗಲು ಕಾರಣವಾದ ಈ ವಿವಾದಕ್ಕೆ ಸುದೀರ್ಘ ಇತಿಹಾಸವೇ ಇದೆ.

## 1914: ಚೀನಾ ಒಪ್ಪದ ಗಡಿ

ಭಾರತ ಮತ್ತು ಚೀನಾ ನಡುವಣ ಗಡಿ ವಿವಾದದ ಅಧಿಕೃತ ದಾಖಲೆಗಳು ಲಭ್ಯವಾಗುವುದು 1914ರ ನಂತರ. ಬ್ರಿಟನ್ ಪ್ರತಿನಿಧಿಗಳು, ಚೀನಾ ಮತ್ತು ಟಿಬೆಟ್‌ನ ನಾಯಕರು ಶಿಮ್ಲಾದಲ್ಲಿ ಸಭೆ ಸೇರಿ ಟಿಬೆಟ್‌ನ ಸ್ಥಾನಮಾನ ನಿರ್ಧರಿಸುವ